ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ ವೃತ್ತಿ ಪದೋನ್ನತಿ ಯೋಜನೆ ಅಡಿಯಲ್ಲಿ ಶೈಕ್ಷಣಿಕ ಹಂತ 11 ರಲ್ಲಿ (ವೇ.ಶ್ರೇ.ರೂ.68900-205500) ಪದೋನ್ನತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ : ಇಡಿ/483/ಯುಎನ್ಇ/2017 ದಿನಾಂಕ : 16.03.2019 ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶ ಹಾಗೂ ಮಾರ್ಗಸೂಚಿಗಳು.
2. ಯು.ಜಿ.ಸಿ. ನಿಯಮಗಳ ಆದೇಶ ಸಂಖ್ಯೆ: ಎಫ್1-2/2017(ಇಸಿ/ಪಿಎಸ್), ದಿ:18.07.2018.
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 123 ಡಿಸಿಇ 2020, ಬೆಂಗಳೂರು, ದಿನಾಂಕ: 02.03.2021 ಹಾಗೂ ಪರಿಚಾಲನ ಆದೇಶ ದಿ:16.03.2021.
4. ಈ ಕಛೇರಿಯ ಆದೇಶ ಸಂಖ್ಯೆ: ಕಾಶಿಇ/01/ಸಿಎಎಸ್/2020-21/ಬಸ್ಥಾವಿ ದಿ: 13.08.2021, 29.12.2021 ಮತ್ತು 20.05.2022
5. ಕೇಂದ್ರ ಕಛೇರಿಯಲ್ಲಿ ದಿನಾಂಕ: 22-12-2022 ರಂದು ನಡೆದ ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ಸಭಾ ನಡಾವಳ.
6. ಸರ್ಕಾರದ ಪತ್ರ ಸಂಖ್ಯೆ: ಇಡಿ/147/ಡಿಸಿಇ/2022 (ಇ) ದಿನಾಂಕ: 03.11.2022.

* * * *

**ಪ್ರಸ್ತಾವನೆ :**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅರ್ಹ ಸಹಾಯಕ ಪ್ರಾಧ್ಯಾಪಕರಿಗೆ 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗಳನ್ನು ಉಲ್ಲೇಖ (1) ಹಾಗೂ (2)ರ ಆದೇಶಗಳಲ್ಲಿ ಜಾರಿಗೊಳಿಸಲಾಗಿರುತ್ತದೆ. ಈ ಆದೇಶದಲ್ಲಿ ಸಹಾಯಕ ಪ್ರಾಧ್ಯಾಪಕರಿಗೆ ಶೈಕ್ಷಣಿಕ ಹಂತ 10ರ ಯುಜಿಸಿ ವೇತನ ಶ್ರೇಣಿ ರೂ.57700-182400 (ರೂ.6000/- ಎ.ಜಿ.ಪಿ) ಹಂತದಲ್ಲಿ ಪೂರೈಸಿರುವ 04 ವರ್ಷಗಳ ಸೇವೆಯನ್ನು ಪರಿಗಣಿಸಿ ಸಿಎಎಸ್ ವೃತ್ತಿ ಪದೋನ್ನತಿಯಡಿಯಲ್ಲಿ ಉನ್ನತ ಶೈಕ್ಷಣಿಕ ಹಂತ 11ರ ವೇತನ ಶ್ರೇಣಿ ರೂ.68900-205500 (ರೂ.7000/- ಎ.ಜಿ.ಪಿ) ರಲ್ಲಿ ಪದೋನ್ನತಿ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸರ್ಕಾರ ಹಾಗೂ ಯುಜಿಸಿಯ ಉಲ್ಲೇಖ (1) ಮತ್ತು (2) ರ ಆದೇಶಗಳನ್ವಯ 2016ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ಅನ್ವಯಿಸುವ ಷರತ್ತುಗಳಿಗೊಳಪಟ್ಟು ವೃತ್ತಿ ಪದೋನ್ನತಿ ಯೋಜನೆ (Career Advancement Scheme) ಅಡಿಯಲ್ಲಿ ಉನ್ನತ ಶೈಕ್ಷಣಿಕ ಹಂತಗಳಲ್ಲಿ ಪದೋನ್ನತಿ ಮಂಜೂರು ಮಾಡಲು ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (4) ರವರೆಗಿನ ಯುಜಿಸಿ ಹಾಗೂ ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳ ಅನುಸಾರ ಶೈಕ್ಷಣಿಕ ಹಂತ 10ರ ಹುದ್ದೆಯಿಂದ ಉನ್ನತ ಶೈಕ್ಷಣಿಕ ಹಂತ 11ರ ಹುದ್ದೆಗೆ ವೃತ್ತಿ ಪದೋನ್ನತಿ ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರು ತಮ್ಮ ಹಂತದಲ್ಲಿ ಯು.ಜಿ.ಸಿಯ ದಿನಾಂಕ: 18.07.2018ರ ಕಂಡಿಕೆ 5.0 ರಿಂದ 6.4 ರನ್ವಯ ವಿಭಾಗದ ಮುಖ್ಯಸ್ಥರು ಹಾಗೂ ವಿಶ್ವವಿದ್ಯಾಲಯದಿಂದ ನೇಮಕವಾದ ವಿಷಯ ತಜ್ಞರ ಪ್ರತಿನಿಧಿಯನ್ನೊಳಗೊಂಡಂತೆ (Screening-cum-Evaluation Committee) ಸಮಿತಿಯನ್ನು ರಚಿಸಿಕೊಂಡು ಸಹಾಯಕ ಪ್ರಾಧ್ಯಾಪಕರಿಗೆ

ಸಂಬಂಧಿಸಿದಂತೆ ಕ್ಲಾಸ್-6.4 (B). ಗ್ರಂಥಪಾಲಕರಿಗೆ ಸಂಬಂಧಿಸಿದಂತೆ ಕ್ಲಾಸ್-6.4 (D) ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದಂತೆ ಕ್ಲಾಸ್-6.4 (E), ನಮೂನೆ (A,C,D)ಗಳ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ. ಸಿಎಎಸ್ ವೃತ್ತಿ ಪದೋನ್ನತಿಯಡಿಯಲ್ಲಿ ಉನ್ನತ ಶೈಕ್ಷಣಿಕ ಹಂತ 11ಕ್ಕೆ ಅರ್ಹತೆ ಹೊಂದಿರುವವರ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಹಾಗೂ ಪ್ರಾಂಶುಪಾಲರ ಹಂತದ (Screening-cum-Evaluation Committee) ಸಮಿತಿಯ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸುವಂತೆ ಉಲ್ಲೇಖ (4)ರ ಸುತ್ತೋಲೆಗಳಲ್ಲಿ ತಿಳಿಸಲಾಗಿದೆ. ಅದರ ಪ್ರಕಾರ ಪ್ರಾಂಶುಪಾಲರ ಹಂತದ (Screening-cum-Evaluation Committee) ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರಿಗೆ ಉನ್ನತ ಶೈಕ್ಷಣಿಕ ಹಂತ 11 (ರೂ.7000/- ಉನ್ನತ ಎ.ಜಿ.ಪಿ) ರ ಹುದ್ದೆಯ ವೃತ್ತಿ ಪದೋನ್ನತಿಗಾಗಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ಸ್ವೀಕೃತಗೊಂಡಿರುವ ಪ್ರಸ್ತಾವನೆಗಳನ್ನು ಈ ಕಛೇರಿಯ ಹಂತದಲ್ಲಿ ಪರಿಶೀಲಿಸಿ ದಿನಾಂಕ: 22-12-2022 ರಂದು ನಡೆದ ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ಸಭೆಯಲ್ಲಿ ತೀರ್ಮಾನದಂತೆ ಸಹಾಯಕ ಪ್ರಾಧ್ಯಾಪಕರಿಗೆ ಶೈಕ್ಷಣಿಕ ಹಂತ 11ಕ್ಕೆ ಪದೋನ್ನತಿ ಮಂಜೂರು ಮಾಡಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ/13/ಶೈ.ಹಂ.10-11/2022-23/ಬಸ್ಥಾವಿ ಬೆಂಗಳೂರು, ದಿನಾಂಕ : 01.02.2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ದಿನಾಂಕ: 02.03.2021ರ ಸಂಖ್ಯೆ: ಇಡಿ/123/ಡಿಸಿಇ/2020 ರ ಆದೇಶದ ಪ್ರಕಾರ ಪಾಂಶುಪಾಲರ ಹಂತದ (Screening-cum-Evaluation Committee) ಸಮಿತಿಯ ಶಿಫಾರಸ್ಸಿನ ಮೇರೆಗೆ ಹಾಗೂ ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ತೀರ್ಮಾನದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ಒಟ್ಟು: 50 ಸಹಾಯಕ ಪ್ರಾಧ್ಯಾಪಕರಿಗೆ ಶೈಕ್ಷಣಿಕ ಹಂತ 11ರ ಹುದ್ದೆಯ ಯು.ಜಿ.ಸಿ ವೇತನ ಶ್ರೇಣಿ ರೂ.68900-205500 (ರೂ.7000/- ಉನ್ನತ ಎ.ಜಿ.ಪಿ) ಹಂತದ ವೃತ್ತಿ ಪದೋನ್ನತಿಯನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಉಲ್ಲೇಖ (6)ರ ಸರ್ಕಾರದ ಪತ್ರದ ಮೇರೆಗೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಲಾಗಿದೆ.

**ಷರತ್ತುಗಳು :**

1. 2016ರ ಯುಜಿಸಿ ವೇತನ ಶ್ರೇಣಿಗಳಲ್ಲಿನ ಗ್ರೇಡಿಂಗ್ ಆಧಾರಿತ ವಿವಿಧ ಶೈಕ್ಷಣಿಕ ಹಂತದ ವೃತ್ತಿ ಪದೋನ್ನತಿ (ಎಜಿಪಿ) ಮಂಜೂರಾತಿಯು ಉಲ್ಲೇಖ (1) ರಿಂದ (4) ರವರೆಗಿನ ಯುಜಿಸಿ/ಸರ್ಕಾರದ ಮಾರ್ಗಸೂಚಿ/ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

2. ಯು.ಜಿ.ಸಿಯ ದಿನಾಂಕ: 18.07.2018ರ ಅಧಿಸೂಚನೆಯಲ್ಲಿ ನೀಡಲಾಗಿರುವ ಕ್ಲಾಸ್ **6.4 A** - The entry-level Assistant Professors (Level 10) shall be eligible for promotion under the Career Advancement Scheme (CAS) through two successive levels (Level 11 and Level 12), provided they are assessed to fulfill the eligibility and performance criteria as laid down in Clause 6.3. of UGC Regulations ರಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರ ಹಂತದ (Screening-cum-Evaluation Committee) ಸಮಿತಿಯು ಪರಿಶೀಲಿಸಿ ಶಿಫಾರಸ್ಸು ಮಾಡಿರುವ ಮೇರೆಗೆ ಎ.ಜಿ.ಪಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಸಂಪೂರ್ಣ ಜವಾಬ್ದಾರಿ ಪ್ರಾಂಶುಪಾಲರ ಹಂತದ (Screening-cum-Evaluation Committee) ಸಮಿತಿಯದ್ದಾಗಿರುತ್ತದೆ. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರಿಗೆ ವೃತ್ತಿ ಪದೋನ್ನತಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದ ಉಪನ್ಯಾಸಕರು ಹಾಗೂ ಶಿಫಾರಸ್ಸು ಮಾಡಿದ ಪ್ರಾಂಶುಪಾಲರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

3. ಈ ಸಮಿತಿಯು ಉಲ್ಲೇಖ (4)ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಸಹಾಯಕ ಪ್ರಾಧ್ಯಾಪಕರ ಖಾಯಂ ನೇಮಕಾತಿ ದಿನಾಂಕ, ಯು.ಜಿ.ಸಿ ವೇತನ ನಿಗಧಿಕರಣದ ದಿನಾಂಕ, ಸೇವಾ ಪೂರ್ವ ಅವಧಿ ಘೋಷಣೆ, ವೇತನ ರಹಿತ ರಜೆ/ಅನಧಿಕೃತ ಗೈರು ಹಾಜರಿ, ಶಿಸ್ತು ಕ್ರಮದ ಮಾಹಿತಿ, ಸಹಾಯಕ ಪ್ರಾಧ್ಯಾಪಕರಿಗೆ ಕನಿಷ್ಠ 02 ವಾರಗಳ ತರಬೇತಿ, ಓರಿಯೆಂಟೇಷನ್/ರೆಫ್ರೆಷರ್ ಕೋರ್ಸ್‌ಗಳನ್ನು ಪೂರೈಸಿರುವುದು, ಇನ್ನಿತರೆ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ಹಂತದ ಸಮಿತಿಯು ಮತ್ತೊಮ್ಮೆ ಪರಿಶೀಲಿಸುವ ನಿಬಂಧನೆಗೊಳಪಟ್ಟಿರುತ್ತದೆ.

4. ಈ ವೃತ್ತಿ ಪದೋನ್ನತಿ ಮಂಜೂರಾತಿಯು ಯು.ಜಿ.ಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

5. ಸಹಾಯಕ ಪ್ರಾಧ್ಯಾಪಕರಿಗೆ ವೃತ್ತಿ ಪದೋನ್ನತಿಯನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

6. ಈ ಆದೇಶದನ್ವಯ ಮಂಜೂರು ಮಾಡಲಾದ ಶೈಕ್ಷಣಿಕ ಹಂತಗಳ ವೃತ್ತಿ ಪದೋನ್ನತಿಯು ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತೆಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕ್ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

7. ವೃತ್ತಿ ಪದೋನ್ನತಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರುಗಳು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸಹಾಯಕ ಪ್ರಾಧ್ಯಾಪಕರ ವೇತನ ನಿಗದೀಕರಣದ ಬಗ್ಗೆ ಅಗತ್ಯ ಕ್ರಮಕ್ಕೈಗೊಳ್ಳತಕ್ಕದ್ದು.

8. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಹಾಗೂ ತಿದ್ದುಪಡಿ ನಿಯಮಗಳು 2015ರನ್ವಯ ಸರ್ಕಾರಿ ನೌಕರರು ಸರ್ಕಾರದಿಂದ ನಿಗದಿಪಡಿಸಲಾಗಿರುವ ಅಧಿಕೃತ ಏಜೆನ್ಸಿಯಿಂದ (KEONICS) ನಡೆಸಲಾಗುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗಿರುತ್ತದೆ. ಆದುದರಿಂದ ಈ ಆದೇಶದಲ್ಲಿ ವೃತ್ತಿ ಪದೋನ್ನತಿ ಮಂಜೂರಾಗಿರುವ ಸಹಾಯಕ ಪ್ರಾಧ್ಯಾಪಕರ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪೂರೈಸಿ ಸಲ್ಲಿಸುವಂತಹ ಪ್ರಮಾಣ ಪತ್ರಗಳನ್ನು ಅವರುಗಳ ವೃತ್ತಿ ಪದೋನ್ನತಿ ದಾಖಲಾತಿಗಳೊಂದಿಗೆ ಕಾಲೇಜಿನಲ್ಲಿ ಸಂರಕ್ಷಿಸುವಂತೆ ಪ್ರಾಂಶುಪಾಲರಿಗೆ ತಿಳಿಸಲಾಗಿದೆ.

9. ಸಹಾಯಕ ಪ್ರಾಧ್ಯಾಪಕರು ವಿವಿಧ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಪಿಹೆಚ್.ಡಿ ಪದವಿಗಳ ನೈಜತೆ ವರದಿಯ ಆಧಾರದ ಮೇಲೆ ಆದೇಶ ಹೊರಡಿಸಲಾಗಿದ್ದು, ಈ ಬಗ್ಗೆ ಮುಂದೆ ಅಸಂಗತೆ ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಆದೇಶವನ್ನು ರದ್ದುಪಡಿಸುವ ಷರತ್ತಿಗೊಳಪಟ್ಟಿರುತ್ತದೆ.

10. ಉಲ್ಲೇಖ (6)ರ ಸರ್ಕಾರದ ಪತ್ರದನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ ಉನ್ನತ ಶೈಕ್ಷಣಿಕ ಹಂತ 11 ರ ವೃತ್ತಿ ಪದೋನ್ನತಿಗೆ ಅರ್ಹರಾಗಿರುತ್ತಾರೆ.

*(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)*

01/02/2023

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ ರಾಜ್ಯ, ಬೆಂಗಳೂರು-560 001 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಮೇಲ್ಕಂಡ ಆದೇಶವನ್ನು ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರ/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರ ಗಮನಕ್ಕೆ ಬರುವಂತೆ ಸೂಚಿಸಲಾಗಿದೆ. ಉನ್ನತ ಎ.ಜಿ.ಪಿ.ಗೆ ವರದಿ ಮಾಡಿಕೊಂಡ ಬಗ್ಗೆ ಸಿ.ಟಿ.ಸಿ., ಅಂತಿಮ ವೇತನ

ಪ್ರಮಾಣ ಪತ್ರಗಳೊಂದಿಗೆ ವೇತನ ನಿಗದೀಕರಣಕ್ಕಾಗಿ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರು. GE IV A (ಎ & ಇ ಲೆಕ್ಕ ಪರಿಶೋಧನೆ-1. ಲೆಕ್ಕ ಪರಿಶೋಧನೆ-2) ಕರ್ನಾಟಕ. ಬೆಂಗಳೂರು-560 001 ಇವರಿಗೆ ಕಳುಹಿಸಿ ಕೊಡುವಂತೆ ಸೂಚಿಸಲಾಗಿದೆ.

3. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
4. ಮಾಹಿತಿ ಅಧಿಕಾರಿಗಳು. ಮಾಹಿತಿ ವಿಭಾಗ. ಕೇಂದ್ರ ಕಛೇರಿ. ಬೆಂಗಳೂರು – ಮೇಲ್ಕಂಡ ಆದೇಶ ಹಾಗೂ ಅನುಬಂಧವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

<u>ಪ್ರತಿಯನ್ನು :</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು. ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ). ಬಹುಮಹಡಿಗಳ ಕಟ್ಟಡ. ಬೆಂಗಳೂರು -560 001 – ಮಾಹಿತಿಗಾಗಿ.
2. ವ್ಯವಸ್ಥಾಪಕರು/ಅಧೀಕ್ಷಕರು. ಆಯವ್ಯಯ ವಿಭಾಗ. ಕೇಂದ್ರ ಕಛೇರಿ. ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ವ್ಯವಸ್ಥಾಪಕರು/ಅಧೀಕ್ಷಕರು. ಸೇವಾ ವಿಭಾಗ-1. ಕೇಂದ್ರ ಕಛೇರಿ. ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರಿಗೆ ಸಿಎಎಸ್ ವೃತ್ತಿ ಪದೋನ್ನತಿಯಡಿ ಶೈಕ್ಷಣಿಕ ಹಂತ 10 ರಿಂದ ಶೈಕ್ಷಣಿಕ ಹಂತ 11ರ ವೇ.ಶ್ರೇ.ರೂ.68900-205500 ರಲ್ಲಿ ಪದೋನ್ನತಿ ಮಂಜೂರು ಮಾಡಿರುವ ಪಟ್ಟಿ.

ಆದೇಶ ಸಂಖ್ಯೆ : ಕಾಶಿಇ/13/ಶೈ.ಹಂ.10-11/2022-23/ಬಸ್ಥಾವಿ ದಿನಾಂಕ: 01-02-2023

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು |
|---|---|---|---|
| 1 | 2 | 3 | 4 |
| 1 | ಡಾ ಮೋಹನ್‌ಕುಮಾರ್ ಕೆ ಎಸ್ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಪ್ಪಿನಂಗಡಿ, ಪುತ್ತೂರು, (ದ.ಕ) |
| 2 | ಡಾ ಉಮಾಕಾಂತ್ ಆರ್ | ಭೂಗೋಳಶಾಸ್ತ್ರ | ಶ್ರೀ ಡಿ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು |
| 3 | ಡಾ ವೀಣಾ ಎಂ | ನಿರ್ವಹಣಾಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಂಕೋಲಾ (ಉ.ಕ) |
| 4 | ಡಾ ವೃಂದ ಎನ್ ಕೆ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು, ಮೈಸೂರು |
| 5 | ಡಾ ಪ್ರಮೋದ್ ಬಿ | ಭೌತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿ.ನರಸೀಪುರ, ಮೈಸೂರು |
| 6 | ಡಾ ಮುನಿಕೆಂಪೇಗೌಡ ಎಂ | ಕನ್ನಡ | ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು |
| 7 | ಡಾ ಮೋಹನ್ ಕುಮಾರ್ ಎಂ.ಜೆ | ಕನ್ನಡ | ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು, ತುಮಕೂರು ಜಿ॥ |
| 8 | ಡಾ ನದಿಯಾ ಆರ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರುಪೇಟೆ, ಬಾಂಗಾರು ತಿರುಪತಿ, ಕೋಲಾರ |
| 9 | ಡಾ ಪಲ್ಲವಿ | ನಿರ್ವಹಣಾಶಾಸ್ತ್ರ | ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, (ಸ್ವಾಯತ್ತ) ಬಳ್ಳಾರಿ |
| 10 | ಡಾ ಲೀಲಾವತಿ ಎನ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಟ, ಪಡುಕೆರೆ, ಉಡುಪಿ |
| 11 | ಡಾ ರೇಖಾ ಈ ಜಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು, ಬಳ್ಳಾರಿ ಜಿಲ್ಲೆ. |
| 12 | ಡಾ ವೀರೇಶ | ವಾಣಿಜ್ಯಶಾಸ್ತ್ರ | ಶ್ರೀ ಪಂಪಣ್ಣ ಶರಣಪ್ಪ ಗುಗ್ಗಳ ಶೆಟ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಗಿರಿ, ಕೊಪ್ಪಳ |
| 13 | ಡಾ ಪಾಂಡುರಂಗ ಬಿ | ಸಮಾಜಕಾರ್ಯ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ, ಶಿವಮೊಗ್ಗ |
| 14 | ಡಾ ಮಹೇಶ್ ಎ | ನಿರ್ವಹಣಾಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು, ಬಳ್ಳಾರಿ |
| 15 | ಡಾ ಬಾಬುರಾಯ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುರುಮಠಕಲ್, ಯಾದಗಿರಿ |
| 16 | ಡಾ ಸಂತೋಷಕುಮಾರ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಭಾವಿ, ಯಾದಗಿರಿ ಜಿಲ್ಲೆ |
| 17 | ಡಾ ಸುನಿಲ್ ಕುಮಾರ್ ಎಂ ಎನ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ |
| 18 | ಡಾ ಗೀತಾ ಹಾದಿಮನಿ | ಗಣಿತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ, ಶಿವಮೊಗ್ಗ |
| 19 | ಡಾ ಮೌನೇಶ್ವರ ಬಡಿಗೇರ | ಸಮಾಜಶಾಸ್ತ್ರ | ಶ್ರೀಮತಿ ಸೋಮವ್ವ ಚ ಅಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ ಕೆ ಕೊಪ್ಪ, ಬೆಳಗಾವಿ |
| 20 | ಡಾ ಪ್ರೀತಮ್ ಡಿ | ವಾಣಿಜ್ಯಶಾಸ್ತ್ರ | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಾಲ್ಮೀಕಿ ರಸ್ತೆ, ಪಡುವಾರಹಳ್ಳಿ ಮೈಸೂರು |
| 21 | ಡಾ ದಿನೇಶ ಹೆಚ್ ಇ | ರಸಾಯನಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೃಷ್ಣರಾಜನಗರ |
| 22 | ಡಾ ಸಿದ್ದಪ್ಪ ಮಾದರ | ಸಮಾಜಕಾರ್ಯ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೃಷ್ಣರಾಜನಗರ |
| 23 | ಡಾ ಮೇರಿ ಎಂ.ಜೆ | ಸಮಾಜಕಾರ್ಯ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು, ಬಂಟ್ವಾಳ ತಾ॥ |
| 24 | ಡಾ ಪಾರ್ಥ ಟಿ | ವಾಣಿಜ್ಯಶಾಸ್ತ್ರ | ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಳ್ಳಿ, ಚಾಮರಾಜನಗರ |

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರಿಗೆ ಸಿಎಎಸ್ ವೃತ್ತಿ ಪದೋನ್ನತಿಯಡಿ ಶೈಕ್ಷಣಿಕ ಹಂತ 10 ರಿಂದ ಶೈಕ್ಷಣಿಕ ಹಂತ 11ರ ವೇ.ಶ್ರೇ.ರೂ.68900–205500 ರಲ್ಲಿ ಪದೋನ್ನತಿ ಮಂಜೂರು ಮಾಡಿರುವ ಪಟ್ಟಿ.

ಆದೇಶ ಸಂಖ್ಯೆ : ಕಾಶಿಇ/13/ಶೈಹಂ.10–11/2022–23/ಬಸ್ಥಾವಿ ದಿನಾಂಕ: 01–02–2023

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು |
|---|---|---|---|
| 1 | 2 | 3 | 4 |
| 25 | ಡಾ ಸುಪ್ರಿಯಾ ಪಿ ಆರ್ | ಸಮಾಜಕಾರ್ಯ | ಡಾ ಕೆ ಶಿವರಾಮ ಕಾರಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ, ಸುಳ್ಯ ತಾ. ದ.ಕ |
| 26 | ಡಾ ನಯನ್ ಜೆ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾನಗಲ್ಲ |
| 27 | ಡಾ ಮೌನೇಶ ಕೆ.ಪಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಡ ತಾ. ಕುಮಟಾ, ಉತ್ತರ ಕನ್ನಡ ಜಿಲ್ಲೆ |
| 28 | ಡಾ ಶ್ರುತಿ ಡಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ನಗರ ಮೈಸೂರು |
| 29 | ಡಾ ರಾಜ್‌ಕುಮಾರ್ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ |
| 30 | ಡಾ ಚಂದ್ರಶೇಖರ್ ಬಿ ಎಂ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೇಲುಕೋಟೆ, ಪಾಂಡವಪುರ ॥ತಾ॥ ಮಂಡ್ಯ ಜಿಲ್ಲೆ |
| 31 | ಡಾ ಮರಿಯಾ ರೋಡ್ರಿಗಿಸ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾವರ. ಉ.ಕ ಜಿಲ್ಲೆ |
| 32. | ಡಾ ಸಂದೀಪ್.ಕೆ | ವಾಣಿಜ್ಯಶಾಸ್ತ್ರ | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೈರಾಪುರ |
| 33 | ಡಾ ಸಂಜೀವ ಕುಮಾರ | ವಾಣಿಜ್ಯಶಾಸ್ತ್ರ | ಎಸ್.ಜಿ.ಆರ್.ಸಿ.ಎಂ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬಳ್ಳಾರಿ |
| 34 | ಡಾ ರಮೇಶ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಾಲ್ಕಿ ಜಿ॥ ಬೀದರ |
| 35 | ಡಾ ಪ್ರೀತಿ | ವಾಣಿಜ್ಯಶಾಸ್ತ್ರ | ಜಿ.ವಿ.ಪಿ.ಪಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ |
| 36 | ಡಾ ಯಲ್ಲಮ್ಮ ಕೆ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಾವರಗೇರಾ, ಕುಷ್ಟಗಿ, ಕೊಪ್ಪಳ ಜಿಲ್ಲೆ. |
| 37 | ಡಾ ಲವಕುಮಾರ ಇ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಾವರಗೇರಾ, ಕುಷ್ಟಗಿ, ಕೊಪ್ಪಳ |
| 38 | ಡಾ ಪಟ್ಟಣ ರಾಕೇಶ | ಸಮಾಜಕಾರ್ಯ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ, ಶಿವಮೊಗ್ಗ |
| 39 | ಡಾ ಅನ್ನಪೂರ್ಣ ಗುಡುದೂರು | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ, ಬಳ್ಳಾರಿ ಜಿಲ್ಲೆ |
| 40 | ಡಾ ಗಾಯಿತ್ರಮ್ಮ ಟಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೂಡ್ಲಿಗಿ |
| 41 | ಡಾ ಸುಮಿತ್ರ ವಿ ಅಣ್ಣಿಗೇರಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀಡಿ, ಖಾನಾಪುರ (ತಾ), ಬೆಳಗಾವಿ |
| 42 | ಡಾ ಶಿವಾಜಿ ರಾಮಾ ಗುಡಾಜಿ | ಆಂಗ್ಲಭಾಷಾ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಿತ್ತೂರ, ಜಿ॥ ಬೆಳಗಾವಿ |
| 43 | ಡಾ ಸುಜಾತಮ್ಮ | ಅರ್ಥಶಾಸ್ತ್ರ | ಶ್ರೀ ಜಗದ್ಗುರು ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಹಟ್ಟಿ, ಗದಗ |
| 44 | ಡಾ ಸುನಿಲ ಮಣಕವಾಡ | ಸಮಾಜಕಾರ್ಯ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತ್ತಕೋತ್ತರ ಕೇಂದ್ರ ಜಮಖಿಂಡಿ, ಬಾಗಲಕೋಟೆ |
| 45 | ಡಾ ಸಿದ್ಧಲಿಂಗಪ್ಪ | ಆಂಗ್ಲಭಾಷೆ | ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ನರಗುಂದ |
| 46 | ಡಾ ಮೋಹನ್ ದಾಸ್ | ಗಣಿತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು, ಬಂಟ್ವಾಳ, ದ.ಕ. ಜಿಲ್ಲೆ |

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರಿಗೆ ಸಿಎಎಸ್ ವೃತ್ತಿ ಪದೋನ್ನತಿಯಡಿ ಶೈಕ್ಷಣಿಕ ಹಂತ 10 ರಿಂದ ಶೈಕ್ಷಣಿಕ ಹಂತ 11ರ ವೇ.ಶ್ರೇ.ರೂ.68900-205500 ರಲ್ಲಿ ಪದೋನ್ನತಿ ಮಂಜೂರು ಮಾಡಿರುವ ಪಟ್ಟಿ.

ಆದೇಶ ಸಂಖ್ಯೆ : ಕಾಶಿಇ/13/ಶೈ.ಹಂ.10-11/2022-23/ಬಸ್ಥಾಪಿ ದಿನಾಂಕ: 01-02-2023

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು |
|---|---|---|---|
| 1 | 2 | 3 | 4 |
| 47 | ಡಾ ಶ್ರೀದೇವಿ ಕೆ | ಸಮಾಜಕಾರ್ಯ | ಶ್ರೀಮತಿ ರುಕ್ಮಿಣಿ ಶೆಡ್ತಿ ಸ್ಮಾರಕ ನ್ಯಾಷನಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು & ಸ್ನಾತಕೋತ್ತರ ಅಧ್ಯಾಯನ ಕೇಂದ್ರ ಬಾರ್ಕೂರು, ಉಡುಪಿ ಜಿಲ್ಲೆ |
| 48 | ಡಾ ರೂಪ. ಜಿ.ಕೆ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ, ಶಿವಮೊಗ್ಗ |
| 49 | ಡಾ ಅಜಯಕುಮಾರ ಸಿ.ಹೆಚ್ | ಸಮಾಜಕಾರ್ಯ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ, ಶಿವಮೊಗ್ಗ |
| 50 | ಡಾ ಬಸವರಾಜ ಎಂ ಬೂದನೂರ | ರಸಾಯನಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ |

*(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

01/02/2023

ಮುಖ್ಯ ಆಡಳಿತಾಧಿಕಾರಿಗಳು

ಕಾಲೇಜು ಶಿಕ್ಷಣ ಇಲಾಖೆ